Sri N. B. SIRDESAI.— May I know whether actual possession of these 5 acres and 16 guntas has been given and when payment of gratuity has been made to the family of the deceased Sri Honnavar and why so much delay was caused by Government in releasing the land to the second Guard Sri Mudaligi ?

Sri ALUR HANUMANTHAPPA.—Regarding the first, Government have sanctioned 5 acres and 16 guntas land. As regards possession, the officer concerned will take necessary action to see that possession is handed over to him. Regarding the second case, Government will consider the application and see that land is granted in favour of the family of the deceased.

ಶ್ರೀ ಎಚ್. ಬಿ. ಜ್ವಾಲನಯ್ಯ.—ಕೊಲೆಯಾದ ಒಬ್ಬ ಗಾರ್ಡ್‌ನ ಸಂಬಂಧಿಕರಿಗೆ 5 ಎಕರೆ 16 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ, ಅದೇ ಇನ್ನೊಂದು ಕೇಸ್ ಬಗ್ಗೆ 5 ಎಕರ ಜಮೀನನ್ನು ಕೊಡುವ ಬಗ್ಗೆ ಇನ್ನೂ ವಿಚಾರಣೆಯಲ್ಲಿದೆ ಎಂದು ಹೇಳಿದ್ದೀರಿ. ವಿಚಾರಣೆಯಾಗುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ? ಗಾರ್ಡ್‌ಗಳಿಗೆ ಗನ್ ಕೊಡದಿರುವುದರಿಂದ ಸ್ಮಗಲ್ ಮಾಡುವವರು ತಮ್ಮ ರೈಫಲ್‌ನಿಂದ ಎದುರಿಸಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಎರಡನೆಯವರಿಗೆ ಜಮೀನು ಕೊಡುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ. ಫಾರೆಸ್ಟ್ ನೌಕರದಾರರಿಗೆ ರೈಫಲ್ ಕೊಡದಿರುವುದರಿಂದ ಇಂಥಹ ಕಾರ್ಯಗಳು ನಡೆಯುತ್ತಿವೆ ಎಂಬುದಾಗಿ ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ಒಪ್ಪಬೇಕಾಗಿದೆ. ಇದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಚ್. ರಂಗನಾಥ್.—ಒಂದು ಪೊಕದ್ದಮೆಯ ಬಗ್ಗೆ ಪೋಲೀಸರಿಂದ ತಪಾಸಣೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಇದು ಎಷ್ಟು ಕಾಲದಿಂದ ನಡೆಯುತ್ತಿದೆ ಮತ್ತು ಇದು ತೀರ್ಮಾನವಾಗುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಈಗಲೇ ಹೇಳುವುದಕ್ಕೆ ಆಗುವುದಿಲ್ಲ, ಏಕೆಂದರೆ ತಾರೀಖು 19-2-1969ರಲ್ಲಿ ಕೇಸ್ ಪತ್ತೆಯಾಯಿತು. ಪತ್ತೆಯಾದಾಗ ಬಾಡಿ ಡೀಕಂಪೋಸ್ ಆಗಿತ್ತು ಈ ಕಾರಣದಿಂದ ಇನ್ನೂ ಪೋಲೀಸರಿಂದ ತಪಾಸಣೆ ನಡೆಯುತ್ತಿದೆ.

ಶ್ರೀ ಎಲ್. ಎಸ್. ನಾಯಕ್.—ಎಸ್. ಎಸ್. ಮೂಡಲಗೆಯತಂದೆಗೆ ಜಮೀನು ಕೊಡುತ್ತೀರೋ ಅಥವಾ ಆತನ ಹೆಂಡತಿಗೆ ಜಮೀನು ಕೊಡುತ್ತೀರೋ ?

ಶ್ರೀ ಆಲೂರು ಹನುಮಂತಪ್ಪ.—ಯಾರು ಅಪ್ಲಿಕೇಷನ್ ಹಾಕಿದ್ದಾರೋ ಅವರಿಗೆ ಕೊಡುತ್ತೇವೆ. ಆತನ ತಂದೆ ಅರ್ಜಿ ಹಾಕಿದ್ದರೆ ಆತನ ತಂದೆಗೆ ಜಮೀನು ಕೊಡುತ್ತೇವೆ, ಆತನ ಹೆಂಡತಿ ಅರ್ಜಿ ಹಾಕಿದ್ದರೆ ಹೆಂಡತಿಗೆ ಕೊಡುತ್ತೇವೆ.

Security Officer for the Spun Silk Mills, Channapatna

194. Sri T. V. KRISHNAPPA (Channapatna).—

Will the Minister for Agriculture be pleased to state :—

(*a*) whether the Government have taken a decision to post a Security Officer for the Spun Silk Mills, Channapatna ;

(*b*) if so, whether a person has been appointed to the said post;

(*c*) his qualifications; the qualifications required for being appointed as a Security Officer;

(*d*) whether he is a local person ?

Sri B. RACHAIAH (Minister for Agriculture).—

(*a*) A post of Security Officer has been sanctioned.

(*b*) At present the post is vacant.

(*c*) An officer of Police Department or an ex-serviceman is considered suitable.

(*d*) Does not arise.

ಶ್ರೀ ಟಿ. ವಿ. ಕೃಷ್ಣಪ್ಪ.—ಸ್ವಾಮಿ, ಚನ್ನಪಟ್ಟಣದ ಸ್ಪನ್ ಸಿಲ್ಕ್ ಕಾರ್ಖಾನೆಯಲ್ಲಿ ರಕ್ಷಣಾ ಅಧಿಕಾರಿಯನ್ನು ನೇಮಕ ಮಾಡುತ್ತೇವೆಂದು ಈಗ ಎರಡು ವರ್ಷಗಳ ಕೆಳಗೆ ತಾವು ಹೇಳಿದ್ದಿರಿ, ಆದರೆ ಅವರನ್ನು ಇದುವರೆಗೂ ನೇಮಕ ಮಾಡದೇ ಇರುವುದಕ್ಕೆ ರಾಜಕೀಯ ಕಾರಣ ಏನು ?

ಶ್ರೀ ಬಿ. ರಾಚಯ್ಯ. —ಕಮಿಷನ್ಡ್ ಆಫೀಸಿನಿಂದ 12 ಜನಗಳ ಹೆಸರನ್ನು ಈ ಹುದ್ದೆಗೆ ಸೆಲೆಕ್ಟ್ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದರು. ಅವರನ್ನು ಇಂಟರ್‌ವ್ಯೂಗೆ ಕರೆದಾಗ ಕೇವಲ ಇಬ್ಬರು ಮಾತ್ರ ಬಂದಿದ್ದರು. ಈ ಹುದ್ದೆ 450 ರೂಪಾಯಿಗಳ ಸಂಬಳದ ಗ್ರೇಡು. ಆದ್ದರಿಂದ ಈ ಹುದ್ದೆಗೆ ಸೂಟಬರ್ ಆಫೀಸರು ಬಾರದೆ ಇರುವುದರಿಂದ ಆ ಹುದ್ದೆಯನ್ನು ಭರ್ತಿ ಮಾಡಲಿಲ್ಲ.

1-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಹತೆಯುಳ್ಳ ರಕ್ಷಣಾಧಿಕಾರಿಯನ್ನು ಅಲ್ಲಿ ನೇಮಕ ಮಾಡುವ ಅವಶ್ಯಕತೆ ಬಹಳವಾಗಿದ್ದರೂ ಕೂಡ ಅವರನ್ನು ಇಲ್ಲಿಯವರೆಗೆ ನೇಮಕ ಮಾಡದೆ ಈಗ ಅಲ್ಲಿ ಹಂಗಾಮಿಯಾಗಿ ಕೆಲಸ ಮಾಡುವ ಮನುಷ್ಯನನ್ನೇ ಆ ಕೆಲಸದಲ್ಲಿ ಮುಂದುವರಿಸಬೇಕೆಂಬ ಉದ್ದೇಶದಿಂದ ಆ ಹುದ್ದೆಯನ್ನು ಭರ್ತಿ ಮಾಡದೆ ಹಾಗೆಯೇ ಇಟ್ಟಿರುವುದು ನಿಜವಲ್ಲವೇ ?

ಶ್ರೀ ಬಿ. ರಾಚಯ್ಯ.—ಅಲ್ಲ. ಪೋಲೀಸ್ ಇಲಾಖೆಯಲ್ಲಿ ಈ ಹುದ್ದೆಗೆ ಲಗತ್ತಾದವರು ಸಿಕ್ಕುವುದಿಲ್ಲ. ಅದಕ್ಕಾಗಿ ಈಗ ಎರಡು ವರ್ಷಗಳಿಂದ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ನಿಧಾನವಾಯಿತು. 2-12-1968ರಲ್ಲಿ ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳಬೇಕೆಂದು ಕಮಿಷನ್ಡ್ ಆಫೀಸಿಗೆ ಸರ್ಕಾರ ಆದೇಶವನ್ನು ಕಳುಹಿಸಿಕೊಟ್ಟಿದ್ದರು. ಅವರು ಕಳುಹಿಸಿಕೊಟ್ಟಿದ್ದವರ ಪೈಕಿ ಇಂಟರ್‌ವ್ಯೂಗೆ ಬಂದಿದ್ದವರು ಆ ಹುದ್ದೆಗೆ ಸೂಟಬಲ್ ಆಗಲಿಲ್ಲ. ಆದ್ದರಿಂದ ಈಗ ಮತ್ತೆ ಆ ಹುದ್ದೆಗೆ ರೀ ಅಡ್ವರ್ಟೈಜ್ ಮಾಡಿ ಎಂದು ಹೇಳಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಆ ಹುದ್ದೆಗೆ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಯಾವ ಗ್ರೇಡಿನ ಆಫೀಸರನ್ನು ನೇಮಕ ಮಾಡಬೇಕೆಂದು ನಿಗದಿ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—1961ನೇ ಇಸವಿಯಲ್ಲಿ ಆ ಹುದ್ದೆಗೆ ಪೋಲೀಸ್ ಡಿಪಾರ್ಟ್‌ಮೆಂಟಿನ ಸಬ್‌ಇನ್‌ಸ್ಪೆಕ್ಟರ್ ಗ್ರೇಡಿನ ಪೋಸ್ಟ್ ಅನ್ನು ಅಲ್ಲಿ ಕ್ರಿಯೇಟ್ ಮಾಡಿ 1968ನೇ ಇಸವಿಯವರೆಗೂ ಸಬ್‌ಇನ್‌ಸ್ಪೆಕ್ಟರು ಆ ಹುದ್ದೆಯಲ್ಲಿ ಡೆಪ್ಯುಟೇಷನ್ ಮೇಲೆ ಇದ್ದರು. ಈಗ ಕೇಂದ್ರ ಸರ್ಕಾರದವರ ಒಂದು ನಿರ್ದೇಶನದಂತೆ ಯಾರಾದರೂ ಒಬ್ಬರು ಎಕ್ಸ್ ಸರ್ವೀಸ್‌ಮನ್ ಅನ್ನು ಆರ್ಮಿಯಿಂದ ರಿಲೀಜ್ ಆಗಿರುವಂತಹ ಆಫೀಸರನ್ನು ಆ ಹುದ್ದೆಗೆ ನೇಮಕ ಮಾಡಬೇಕೆಂಬ ಇರಾದೆ ಸರ್ಕಾರಕ್ಕೆ ಇದೆ. ಈ ದೃಷ್ಟಿಯಿಂದ ಆ ಪೋಸ್ಟಿಗೆ ಅಡ್ವರ್ಟೈಜ್ ಮಾಡಿದೆವು. ಆದರೆ ಅದರಲ್ಲಿ ಸೂಕ್ತವಾದ ಕ್ಯಾಂಡಿಡೇಟ್ ಬರಲಿಲ್ಲ. ಆದಕಾರಣ ಮತ್ತೆ ರೀ ಅಡ್ವರ್ಟೈಜ್ ಮಾಡಿದ್ದೇವೆ. ನಮ್ಮ ಗಮನದಲ್ಲಿ ಬೇರೆ ಯಾರೂ ಇಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ. —ಆ ಹುದ್ದೆ ಇಷ್ಟು ವರ್ಷಗಳಿಂದ ಖಾಲಿ ಇದೆ. ಪೋಲೀಸ್ ಇಲಾಖೆಯಲ್ಲಿ ಈ ಹುದ್ದೆಗೆ ಸರಿಸಮಾನರಾದ, ದಕ್ಷರಾದ ಆಫೀಸರು ಈ ರಾಜ್ಯದಲ್ಲಿ ಎಲ್ಲೂ ದೊರೆಯಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈಗ ಎಕ್ಸ್ ಸರ್ವಿಸ್‌ಮೆನ್ ಅನ್ನು ಆ ಕೆಲಸಕ್ಕೆ ತೆಗೆದುಕೊಳ್ಳಬೇಕು, ಅವರಿಗೆ ಉದ್ಯೋಗವನ್ನು ಕಲ್ಪಿಸಬೇಕು ಎಂದು ಆ ಸೆಕ್ಯೂರಿಟಿ ಪೋಸ್ಟ್ ಕ್ರಿಯೇಟ್ ಆಯಿತು. ಹಿಂದೆ ಆ ಪೋಸ್ಟಿಗೆ ಅಡ್ವರ್ಟೈಸ್ ಮಾಡಿದಾಗ ಅದಕ್ಕೆ ಸೂಟಬಲ್ ಕ್ಯಾಂಡಿಡೇಟ್ ಇರಲಿಲ್ಲ. ಆದ್ದರಿಂದ ಮತ್ತೆ ರೀ ಅಡರ್ಟೈಜ್ ಮಾಡಿದ್ದೇವೆ. ಅಲ್ಲಿಯವರೆಗೆ ಡೆಪ್ಯುಟೇಷನ್ ಮೇಲೆ ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಈ ಪೋಸ್ಟ್ ಪರ್ಮನೆಂಟ್ ಪೋಸ್ಟೋ, ಇದರ ಸ್ಕೇಲು ಯಾವುದು ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಫ್ಯಾಕ್ಟರಿ ಪರ್ಮನೆಂಟ್ ಅಲ್ಲ. ಇದು ಟೆಂಪರರಿ ಪೋಸ್ಟ್. ಇದರ ಗ್ರೇಡು 450 ರೂಪಾಯಿಗಳು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆ ಹುದ್ದೆಗೆ ಒಬ್ಬರು ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ತಾವು ಆ ಹುದ್ದೆಗೆ ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಸೋಲ್ಜರ್ಸ್ ಬೋರ್ಡ್ ಮತ್ತು ಸ್ಟೇಟ್ ಸೋಲ್ಜರ್ಸ್ ಬೋರ್ಡಿನವರನ್ನು ತಾವು ಕನ್‌ಸಲ್ಟ್ ಮಾಡಿದ್ದೀರಾ, ಈ ಹುದ್ದೆಗೆ ಅಲ್ಲಿ ಅರ್ಹರಾದವರು ಯಾರೂ ಸಿಕ್ಕಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಹೌದು ಕನ್‌ಸಲ್ಟ್ ಮಾಡಿದ್ದೇವೆ. ಅವರು 12 ಜನಗಳ ಲಿಸ್ಟ್ ಒಂದನ್ನು ಕಳುಹಿಸಿದ್ದರು. ಅದರಲ್ಲಿ ಇಬ್ಬರು ಮಾತ್ರ ಇಂಟರ್‌ವ್ಯೂಗೆ ಬಂದಿದ್ದರು. ಅವರು ಆ ಹುದ್ದೆಗೆ ಸೂಟಬಲ್ ಆಗಿರಲಿಲ್ಲ. ಆದ್ದರಿಂದ ಹೆಚ್ಚು ಜನ ಬಂದರೆ ಯೋಗ್ಯರಾಗಿರುವವರನ್ನು ಸೆಲೆಕ್ಟ್ ಮಾಡಿಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಮತ್ತೆ ಅದಕ್ಕೆ ರೀ ಅಡ್ವರ್ಟೈಜ್ ಮಾಡಿದ್ದೇವೆ.

Sri H. SIDDAVEERAPPA.—The Hon. Minister just now said this factory is not a permanent one. So far as I know the factory is in existence for more than 30 years. I want to know whether this factory will be transferred to somebody of your choice in private sector.

ಶ್ರೀ ಬಿ. ರಾಚಯ್ಯ.—ಅದು ಪ್ರೈವೇಟ್ ಕಂಪೆನಿ. ಸರ್ಕಾರ ಅದನ್ನು ತೆಗೆದುಕೊಂಡ ಮೇಲೆ ಇಪ್ಪತ್ತಿನವರೆಗೂ ಅಲ್ಲಿ ಕೆಲಸಮಾಡತಕ್ಕ ನೌಕರರು ಯಾರು ಇದ್ದಾರೆ ಅವರು ಖಾಯಂ ಆಗಿ ಇಲ್ಲ. ಆ ಒಂದು ಅರ್ಥದಲ್ಲಿ ನಾನು ಹೇಳಿದ್ದೇನೆ.

ಶ್ರೀ ಟಿ. ವಿ. ಕೃಷ್ಣಪ್ಪ.—ರಕ್ಷಣಾಧಿಕಾರಿ ಆ ಕಾರ್ಖಾನೆಯಲ್ಲಿ ಇರಬೇಕು ಎಂದು ಕಾನೂನು ಇರುವಾಗ ಈಗ ಆ ಕೆಲಸವನ್ನು ಯಾರು ನೋಡುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ.—ಕಾನೂನೇನೂ ಇಲ್ಲ. ಈಗ ಒಬ್ಬ ವಾಚ್‌ಮನ್ ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದಾನೆ. ಚನ್ನಪಟ್ಟಣದ ಜನಗಳು ಅನುಸರಿಸಿಕೊಂಡು ಬರುತ್ತಾ ಇರುವುದರಿಂದ ಅದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ.

Munsiff-Magistrate Court Building at Laxmeshwar Town

205. Sri SIDDAIAH KASHIMATH (Shirhatti).—

Will the Minister for Law, Labour and Parliamentary Affairs be pleased to state :—

(*a*) the year in which the Munsiff-Magistrate Court was sanctioned to Laxmeshwar in Dharwar District ;

(*b*) the year of continuation of the said court ;

(*c*) the building in which the court is now being located ;